ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬಂಡವಾಳ ಹಿಂತೆಗೆಯುವಿಕೆ ಸಚಿವರು) :

ಅ) 1 ಎನ್‌ಜಿಇಎಫ್ ಲಿಮಿಟೆಡ್ ದಿನಾಂಕ : 20–12–2002 ರಿಂದ ಮುಚ್ಚಲಾಗಿದೆ.

2) ಮೈಸೂರು ಲ್ಯಾಂಪ್ಸ್ ವರ್ಕ್ಸ್ ಲಿಮಿಟೆಡ್ : ದಿನಾಂಕ: 11.5.2003 ರಿಂದ ಮುಚ್ಚಲಾಗಿದೆ.

ಆ) ಎನ್‌ಜಿಇಎಫ್ ಗೆ ಅಧ್ಯಕ್ಷರನ್ನು ದಿನಾಂಕ:27.09.2001 ರಿಂದ ನೇಮಕ ಮಾಡಲಾಗಿದ್ದು, ಮೈಸೂರು ಲ್ಯಾಂಪ್ಸ್ ವರ್ಕ್ಸ್‌ಗೆ 28.9.2001 ರಿಂದ ನೇಮಕ ಮಾಡಲಾಗಿದೆ.

ಇ) 1. ಎನ್‌ಜಿಇಎಫ್ ಲಿಮಿಟೆಡ್ : ಈಗಾಗಲೇ ಸ್ವಯಂ ನಿವೃತ್ತಿ ಹೊಂದಿದ ನೌಕರರಿಗೆ ಎಕ್ಸ್‌ಗ್ರೇಷಿಯಾ, ಗ್ರಾಚ್ಯುಟಿ ಮತ್ತು ರಜಾ ನಗದೀಕರಣ ಸೌಲಭ್ಯಗಳ ಹಣವನ್ನು ಪಾವತಿ ಮಾಡಲಾಗಿದೆ. ಪರಿಷ್ಕೃತ ಕೂಲಿ, ವಾರ್ಷಿಕ ಭತ್ಯೆ ಮತ್ತು ತುಟ್ಟಿಭತ್ಯೆ ಬಾಕಿ (Wage revision, increment & D.A arrears) ಇವುಗಳನ್ನು ಅರ್ಹತೆ ಉಳ್ಳ ನೌಕರರಿಗೆ ಪಾವತಿಸಲು ಬಾಕಿ ಇದೆ. ಇದನ್ನು ಆಸ್ತಿ ವಿಲೇವಾರಿ ಮಾಡಿ ಬಂದ ಹಣದಿಂದ ಪಾವತಿ ಮಾಡಬೇಕಾಗಿದೆ. ಲಿಕ್ವಿಡೇಟರ್ ನೇಮಕಾತಿ ನಂತರ ಆಸ್ತಿ ವಿಲೇವಾರಿ ಮಾಡುವ ಕ್ರಮ ಕೈಗೊಳ್ಳಲಾಗುತ್ತದೆ.

2. ಮೈಸೂರು ಲ್ಯಾಂಪ್ಸ್ ವರ್ಕ್ಸ್ ಲಿಮಿಟೆಡ್ : ಈಗಾಗಲೇ 1197 ಉದ್ಯೋಗಿಗಳಿಗೆ ಸ್ವಯಂ ನಿವೃತ್ತಿ ಯೋಜನೆಯ ಸೌಲಭ್ಯಗಳ ಹಣವನ್ನು ಸಂದಾಯ ಮಾಡಲಾಗಿದೆ. ಈಗ 231 ಸ್ವಯಂ ನಿವೃತ್ತಿ ಕೋರಿ ಅರ್ಜಿ ಸಲ್ಲಿಸಿರುವ ಉದ್ಯೋಗಿಗಳಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ. ಆದರೆ, ಇನ್ನುಳಿದ 99 ಉದ್ಯೋಗಿಗಳು ಸ್ವಯಂ ನಿವೃತ್ತಿ ಯೋಜನೆಯಡಿ ಅರ್ಜಿ ಸಲ್ಲಿಸಿರುವುದಿಲ್ಲ, ಇವರಲ್ಲಿ 31 ಉದ್ಯೋಗಿಗಳು ನಿಯೋಜನೆ ಮೇರೆಗೆ ಕೆಲಸ ಮಾಡುತ್ತಿದ್ದಾರೆ. ಕಂಪನಿಯು ಈ ಎಲ್ಲಾ 99 ನೌಕರರನ್ನು ಬಿಡುಗಡೆ ಮಾಡಿದೆ. ಇವರಿಗೆ ಮುಚ್ಚುವಿಕೆ ಪರಿಹಾರ ಪಾವತಿ ಮಾಡಬೇಕಾಗಿದೆ.

ಬಾಗೇಪಲ್ಲಿ ಕ್ಷೇತ್ರದಲ್ಲಿ ಕೂಲಿಗಾಗಿ ಕಾಳು ಯೋಜನೆ

64 (635): ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಿಂದಲೂ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಎಷ್ಟು ಜನರಿಗೆ ಉದ್ಯೋಗವನ್ನು ಒದಗಿಸಲಾಗಿದೆ; ಇದಕ್ಕೆ ತಗಲುವ ಅನುದಾನವೇನು;

ಆ) ಯಾವ ಯಾವ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಈ ಯೋಜನೆಯಡಿಯಲ್ಲಿ ಕೈಗೊಂಡು ಪೂರೈಸಲಾಗಿದೆ; ವಿವರಗಳನ್ನು ಒದಗಿಸುವುದು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಿಂದ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ 2,32,339 ಜನರಿಗೆ ಉದ್ಯೋಗ ಒದಗಿಸಲಾಗಿದೆ. ಇದಕ್ಕೆ ತಗಲಿರುವ ಅನುದಾನ ರೂ. 3,44,54,959.00

ಆ) ವಿವರಗಳು ಜಿಲ್ಲಾಧಿಕಾರಿಗಳು ಕೋಲಾರ ಜಿಲ್ಲೆರವರ ಕಛೇರಿಯಲ್ಲಿ ಲಭ್ಯವಿರುತ್ತವೆ.